ದಿನಾಂಕ 14-10-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಡಿ. ಬಿ ಎಸ್ ವಕೀಲರಿಂದಃ**

ನಾನು 2 ನೇ ಎದುರುದಾರರ ಕಂಪನಿಯಲ್ಲಿ ಎ. ಒ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಹಾಗೂ 2 ನೇ ಎದುರುದಾರರು ಈ ಅರ್ಜಿಯಲ್ಲಿ ಕಂಪನಿಯನ್ನು ಪ್ರತಿನಿಧಿಸಲು ನಿಯೋಜಿತ ಪತ್ರವನ್ನು ನೀಡಿರುತ್ತಾರೆ. ಅವುಗಳ ಅರ್ಹತೆಯಲ್ಲಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

2 ನೇ ಎದುರುದಾರರು ನೀಡಿರುವ ನಿಯೋಜಿತ ಪತ್ರವನ್ನು ಹಾಜರು ಪಡಿಸಿದ್ದು ನಿಶಾನೆ ಆರ್ 1 ಎಂದು ಗುರುತಿಸಲಾಯಿತು. ಕೆಎ 20 ಇಕ್ಯು 9095 ವಾಹನದ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ನಿ. ಆರ್ 2 ಎಂದು ಗುರುತಿಸಲಾಯಿತು. ಆದ್ದರಿಂದ ನಮ್ಮ ವಿರುದ್ಧ ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು -** ಅರ್ಜಿದಾರರ **ಪರ ಶ್ರೀ ಎಸ್ ಎ ವಕೀಲರಿಂದಃ**

ಕೆಎ 20 ಇಕ್ಯು 9095 ಕ್ಕೆ ನೀಡಿರುವಂತರಹ ವಿಮಾ ಪಾಲಿಸಿ ಬಂಡಲ್ ಆಪ್ ಪಾಲಿಸಿ ಎಂದರೆ ಹೌದು. ಕೆಎ 20 ಇಕ್ಯು 9095 ವಾಹನವು ಅಪಘಾತಕ್ಕೆ ಒಳಪಟ್ಟಿರುತ್ತದೆ ಎನ್ನುವ ವಿಷಯವನ್ನು ತಾವು ಒಪ್ಪುತ್ತೀರಿ ಅಲ್ಲವೇ ಎಂದರೆ ಹೌದು. ಮೃತರು ಒಬ್ಬ ನೌಕರರು ಎಂದರೆ ಸರಿಯಲ್ಲ. ಮೃತರು ನೌಕರರು ಆಗಿರುತ್ತಾರೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ನಿಮ್ಮ ಕಂಪನಿಯಿಂದ ತನಿಖೆಯನ್ನು ಮಾಡಿಸಿರುತ್ತಾರೆಯೇ ಎಂದರೆ ಹೌದು. ತನಿಖೆಯ ಬಗ್ಗೆ ನೀವು ಯಾವುದೇ ವರದಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಮಾಡಿರುತ್ತೇವೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ..ಹಿ.ಸಿ.ನ್ಯಾ ಉಡುಪಿ.